# ಶಾರೂಕ್ ರಾಕ್ಸ್!

‘ಜಬ್ ಹ್ಯಾರಿ ಮೆಟ್ ಸೆಜಲ್’ ಬಿಡುಗಡೆಯಾಗಿ ಪ್ರೇಕ್ಷಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರಕಥೆ ಬೋರ್ ಹೊಡೆಯುತ್ತಿರುವ ಬಗ್ಗೆ ದೂರುವವರ ಮಧ್ಯೆ ಎಲ್ಲರೂ ಫುಲ್ ಮಾರ್ಕ್ಸ್ ಕೊಡುತ್ತಿರುವುದು ಶಾರೂಕ್ ಮತ್ತು ಅನೂಷ್ಕಾ ಶರ್ಮಾ ಲವಲವಿಕೆಯ ಅಭಿನಯಕ್ಕೆ. ಈ ಇಬ್ಬರ ಜೋಡಿಯ ಕೆಮಿಸ್ಟ್ರಿ ಕೂಡಾ ಸಿನಿಮಾದಲ್ಲಿ ಚೆನ್ನಾಗಿ ಕೆಲಸ ಮಾಡಿದಂತಿದೆ. ‘ತನ್ನ ಮಗಳ ವಯಸ್ಸಿನ ನಾಯಕಿಯ ಜತೆಗೂ ಶಾರೂಕ್ ಎಷ್ಟೊಂದು ಕಂಫರ್ಟ್ ಜೋಡಿ ಅನ್ನಿಸುತ್ತಾನಲ್ಲಾ..!’ ಎಂದು ಪ್ರೇಕ್ಷಕರು ತಲೆ ಕೆಡಿಸಿಕೊಳ್ಳಲು ಅವಕಾಶವೇ ಇಲ್ಲದಷ್ಟು ನಿಸೂರಾಗಿ ಇಬ್ಬರೂ ಪ್ರೇಮ–ಕಾಮದ ದೃಶ್ಯಗಳನ್ನು ನಿಭಾಯಿಸಿದ್ದಾರೆ.

ಈ ಮಧ್ಯೆ ಬಾಲಿವುಡ್‌ನಲ್ಲಿ ನಡೆಯುತ್ತಿರುವ ‘ಸ್ವಜನಪಕ್ಷಪಾತ’ದ ಚರ್ಚೆಯ ಬಗ್ಗೆ ಶಾರೂಕ್ ಬಹಳ ಬುದ್ಧಿವಂತಿಕೆಯಿಂದ ಉತ್ತರ ನೀಡಿದ್ದಾನೆ. ‘ಬಾಲಿವುಡ್‌ನಲ್ಲಿ ಸ್ವಜನ ಪಕ್ಷಪಾತ ಜೋರಾಗಿ ನಡೆಯುತ್ತಿದೆಯಂತಲ್ಲ?’ ಎಂದು ಟೀವಿಯವರು ಕೇಳಿದ ಪ್ರಶ್ನೆಗೆ ಶಾರೂಕ್– ‘ಹೌದಾ..! ನನಗೇನೂ ಅರ್ಥವಾಗುತ್ತಿಲ್ಲ. ಈ ಪ್ರಶ್ನೆಗೆ ಉತ್ತರ ಕೊಡುವುದು ಹೇಗೆಂದೂ ಗೊತ್ತಾಗುತ್ತಿಲ್ಲ’ ಎಂದಿದ್ದಾನೆ.



‘ನಾನು ದೆಹಲಿಯ ಹುಡುಗ. ಸಿನಿಮಾ ಹಿನ್ನೆಲೆ ಇಲ್ಲದೆಯೂ ಮುಂಬೈಗೆ ಬಂದೆ. ಇಲ್ಲಿನ ಜನ ನನ್ನನ್ನು ಸ್ವೀಕರಿಸಿದರು. ಇಲ್ಲಿ ಸ್ವಜನ ಪಕ್ಷಪಾತ ಎಲ್ಲಿದೆ? ನನಗೆ ಇವರ ಚರ್ಚೆ ನಿಜಕ್ಕೂ ಅರ್ಥವೇ ಆಗಿಲ್ಲ. ಇನ್ನು ಉತ್ತರಿಸುವುದು ಎಲ್ಲಿಂದ?’ ಎನ್ನುವುದು ಶಾರೂಕ್ ಮರುಪ್ರಶ್ನೆ!

ಕಂಗನಾ ರನೌತ್ ಕೆಲವು ವಾರಗಳ ಹಿಂದೆ ಆ ಸ್ವಜನ ಪಕ್ಷಪಾತದ ಆರೋಪ ಮಾಡಿದ್ದಳು. ಅದರಲ್ಲೂ ಕರಣ್ ಜೋಹರ್‌ನ ‘ಕಾಫಿ ವಿದ್ ಕರಣ್ ಷೋ’ನಲ್ಲಿ ನೇರವಾಗಿ ಆತನನ್ನು ‘ಸ್ವಜನ ಪಕ್ಷಪಾತದ ಧ್ವಜವಾಹಕ’ ಎಂದೇ ಕರೆದಿದ್ದಳು. ಕಳೆದ ತಿಂಗಳು ನಡೆದ ಐಫಾ ಪ್ರಶಸ್ತಿ ಸಮಾರಂಭದಲ್ಲಿ ವೇದಿಕೆಗೆ ನೃತ್ಯ ಮಾಡಲು ಬಂದ ಕಂಗನಾಳನ್ನು ಕರಣ್ ಜೋಹರ್, ವರುಣ್ ಧವನ್ ಮತ್ತು ಸೈಫ್ ಅಲಿ ಖಾನ್ ಒಟ್ಟು ಸೇರಿ ‘ನೆಪೋಟಿಸಂ ರಾಕ್ಸ್’ ಎಂದು ಲೇವಡಿ ಮಾಡಿದ್ದರು. ಬಳಿಕ ಕ್ಷಮೆಯೂ ಕೇಳಿದ್ದರು. ಈ ಹಿನ್ನೆಲೆಯಲ್ಲೇ ಶಾರೂಕ್‌ಗೆ ಪತ್ರಕರ್ತರು ಪ್ರಶ್ನೆ ಒಗೆದಿದ್ದರು. ಶಾರೂಕ್ ಬುದ್ಧಿವಂತ ಅಲ್ಲ ಎಂದು ಯಾರು ಹೇಳಿದ್ದು? ಸದ್ಯಕ್ಕಂತೂ ಹ್ಯಾರಿ–ಸೆಜಲ್ ಸಿನಿಮಾದ ಮೂಲಕ ಶಾರೂಕ್ ರಾಕ್ಸ್!



## ಮರಳಿದಳು ಚಿತ್ರಾಂಗದಾ

ಬಾಲಿವುಡ್‌ನ ಸೆಕ್ಸೀ ನಟಿ ಚಿತ್ರಾಂಗದಾ ಸಿಂಗ್ ಮತ್ತೆ ಮರಳಿರುವ ಸುದ್ದಿ ಬಂದಿದೆ. ಸಂಜಯ್ ದತ್ ನಟಿಸುತ್ತಿರುವ ಹೊಸ ಚಿತ್ರ ‘ಸಾಹೆಬ್ ಬೀವಿ ಆ್ಯಂಡ್ ಗ್ಯಾಂಗ್‌ಸ್ಟರ್ 3’ ಸಿನಿಮಾದಲ್ಲಿ ಚಿತ್ರಾಂಗದಾ ನಾಯಕಿ! ಈ ಹಿಂದಿನ ಎರಡು ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ ಟಿಗ್ಮಾಂಶು ದುಲಿಯಾ ಈ ಚಿತ್ರವನ್ನೂ ನಿರ್ದೇಶಿಸುತ್ತಿದ್ದಾರೆ.

ಚಿತ್ರಾಂಗದಾ ಬೆಳ್ಳಿತೆರೆಯ ಮೇಲೆ ಕಾಣಿಸುತ್ತಿರುವುದು ಇತ್ತೀಚೆಗೆ ಅಪರೂಪವಾಗುತ್ತಿದೆ. ಎರಡು ವರ್ಷಗಳ ಹಿಂದೆ ‘ಗಬ್ಬರ್ ಈಸ್ ಬ್ಯಾಕ್’ ಚಿತ್ರದಲ್ಲಿ ಚಿತ್ರಾಂಗದಾ ಕಾಣಿಸಿಕೊಂಡಿದ್ದಳು. ಆದರೆ ಅದು ಒಂದು ಹಾಡಿನ ದೃಶ್ಯವಷ್ಟೇ ಆಗಿತ್ತು. ಆದರೂ ಪ್ರೇಕ್ಷಕರು ಈಕೆಯನ್ನು ನೆನಪಿಟ್ಟುಕೊಂಡಿರುವುದು ಸುಳ್ಳಲ್ಲ. ಇದೀಗ ಸಂಜಯ್ ದತ್‌ಗೆ ಹೀರೋಯಿನ್ ಆಗಿರುವುದು ಈಕೆಯ ಅದೃಷ್ಟ ಕುದುರಿಸಿದಂತೆ ಕಾಣುತ್ತಿದೆ.

■ ಬಿಂದು